**ಕರ್ನಾಟಕ ಲೋಕಾಯುಕ್ತ**

ನಂ.ಉಪಲೋಕ್–1/ಡಿಇ/175/2017/ಎ.ಆರ್.ಇ–10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 31/12/2020.

**ವಿಚಾರಣಾ ವರದಿ**

**ಉಪಸ್ಥಿತರು:** ಪುಷ್ಪಾಂಜಲಿ.ಬಿ.,
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಶ್ರೀ ಕೋದಂಡರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಳ್ಳಂದೂರು ವಾರ್ಡ್ ನಂ. 150, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1. ಕಂಪ್ಲೆಂಟ್/ಉಪಲೋಕ್/ಬಿಸಿಡಿ–22/2016/ಎ.ಆರ್.ಎಲ್.ಓ–1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 4/11/2016.
2. ಸರ್ಕಾರದ ಆದೇಶ ಸಂಖ್ಯೆ: ನಅಇ 701 ಎಂಎನ್‌ಯು 2016 ಬೆಂಗಳೂರು, ದಿನಾಂಕ: 22/12/2016.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–1/ಡಿಇ/175/2017, ಬೆಂಗಳೂರು ದಿನಾಂಕ: 04/02/2017.

* * * *

ಈ ದೂರನ್ನು, ದೂರುದಾರರಾದ ಶ್ರೀಮತಿ ವತ್ಸಲಾ ಧನಂಜಯ, ಶುಭ ಎನ್‌ಕ್ಲೇವ್ ಸೈಟ್ ಓನರ್ಸ್ ಸಂಘದ ಅಧ್ಯಕ್ಷರು, 1ನೇ ಮುಖ್ಯ ರಸ್ತೆ, ಹರಳೂರು ವಾಟರ್ ಟ್ಯಾಂಕ್, ಬೆಂಗಳೂರು ನಗರ ಜಿಲ್ಲೆ ಇವರು ಶ್ರೀ ಕೋದಂಡರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಳ್ಳಂದೂರು ವಾರ್ಡ್ ನಂ. 150, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನಗರ ಜಿಲ್ಲೆ ಇವರ ಕರ್ತವ್ಯ ಲೋಪ ಮತ್ತು ದುರ್ನಡತೆಯಿಂದ ವರ್ತಿಸಿರುತ್ತಾರೆಂದು ಆಪಾದಿಸಿ ದೂರು ದಾಖಲಿಸಿರುತ್ತಾರೆ.

31/12

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 22/12/2016 ರಂದು, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತ–1 ರವರು ದಿನಾಂಕ: 04/02/2017 ರಂದು ಅಪರ ನಿಬಂಧಕರು, ವಿಚಾರಣೆಗಳು–10 ರವರಿಗೆ ವಿಚಾರಣೆ ಮಾಡಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 27/04/2017 ರಂದು ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ–1

2. ಆಪಾದಿತ ಸರ್ಕಾರಿ ನೌಕರರಾದ ಶ್ರೀ ಕೋದಂಡರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ. ಬೆಳ್ಳಂದೂರು ವಾರ್ಡ್ ನಂ.150 ಆದ ನೀವು ಈ ಕೆಳಕಂಡ ಕರ್ತವ್ಯಲೋಪವನ್ನು ಎಸಗಿರುತ್ತೀರಿ.

ಆ.ಸ.ನೌಕರರಾದ ನೀವು ಅನಧಿಕೃತ ಕಟ್ಟಡದ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ದಿ: 04/01/2016 ರಂದು ತಾತ್ಕಾಲಿಕ ನೋಟಿಸ್ ನೀಡಿದ್ದು, ಅದೇ ರೀತಿ ದಿ: 14/01/2016 ರಂದು ಕೆ.ಎಂ.ಸಿ. ಕಾಯ್ದೆ ಕಲಂ 320(3) ರನ್ವಯ ಆ ಆದೇಶವನ್ನು ಸ್ಥಿರೀಕರಣಗೊಳಿಸಿ, ಸ್ಥಿರೀಕರಣ ಆದೇಶವನ್ನು ಸಹ ಕಟ್ಟಡದ ಮಾಲೀಕರಾದ ಶ್ರೀ ಗೋಕುಲರೆಡ್ಡಿ ರವರಿಗೆ ಕಳುಹಿಸಿರುತ್ತೀರಿ. ಆದರೂ ಸಹ ಸದರಿ ಕಟ್ಟಡದ ಅನಧಿಕೃತ ಭಾಗವನ್ನು ತೆರವುಗೊಳಿಸಲು ಯಾವುದೇ ಕ್ರಮವನ್ನು

ಲ 3/1/12

ಕೈಗೊಂಡಿಲ್ಲ. ಸದರಿ ಕಟ್ಟಡದ ಭಾಗವನ್ನು ತೆರವುಗೊಳಿಸುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಅನುಮತಿ ಬಂದಿಲ್ಲ, ಅನುಮತಿ ಬಂದ ನಂತರ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದೀರಿ. ಆದರೆ, ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ದೂರುದಾರರು ಈ ದೂರನ್ನು ದಿ: 04/01/2016 ರಂದು ತಾತ್ಕಾಲಿಕ ನೋಟಿಸ್ ಹಾಗೂ ದಿ: 14/01/16 ರಂದು ಕಟ್ಟಡ ತೆರವುಗೊಳಿಸುವ ಬಗ್ಗೆ ಅಂತಿಮ ನೋಟಿಸ್ ನೀಡಿ 10 ತಿಂಗಳು ಕಳೆದಿದ್ದರೂ, ಸದರಿ ಕಟ್ಟಡದ ಅನಧಿಕೃತ ಭಾಗವನ್ನು ತೆರವುಗೊಳಿಸಿರುವ ಬಗ್ಗೆ ಈ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸದೆ ಕರ್ತವ್ಯಲೋಪ ಎಸಗಿರುತ್ತೀರಿ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## ಅನುಬಂಧ–2
## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. **ದೂರಿನ ಸಂಕ್ಷಿಪ್ತ ವಿವರಣೆ** :– ಬೆಂಗಳೂರು ನಗರ ಅರಳೂರು ರಸ್ತೆಯ ನಿವೇಶನ ಸಂಖ್ಯೆ.33ರ ಮಾಲೀಕರಾದ ಶ್ರೀ ಗೋಕುಲರೆಡ್ಡಿ ಎಂಬುವವರು ಕಾನೂನುಬಾಹಿರವಾಗಿ, ಬಿ.ಬಿ.ಎಂ.ಪಿ.ಯ ಅನುಮೋದಿತ ನಕ್ಷೆಯಿಂದಲೇ ಕಟ್ಟಡ ನಿರ್ಮಿಸಿದ್ದು, ಈ ಬಗ್ಗೆ ದೂರುದಾರರು ಆ.ಸ.ನೌಕರರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.
4. ದೂರಿನ ಆಪಾದನೆಗಳಿಗೆ ಆ.ಸ.ನೌಕರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ;

3/1/12

ದೂರುದಾರರು ನೀಡಿದ ದೂರಿನ ಆಧಾರದ ಮೇಲೆ ದಿ: 29/12/2015 ರಂದು ಸದರಿ ಕಟ್ಟಡದ ಮಾಲೀಕರಾದ ಶ್ರೀ ಗೋಕುಲರೆಡ್ಡಿ ರವರಿಗೆ ದಾಖಲೆಗಳನ್ನು ಹಾಜರುಪಡಿಸುವಂತೆ ನೋಟಿಸ್ ನೀಡಿದ್ದು, ಅದೇರೀತಿ ಕಟ್ಟಡವನ್ನು ಸ್ಥಗಿತಗೊಳಿಸುವಂತೆ ತಿಳಿಸಲಾಗಿದೆ. ಆದರೆ ಸದರಿ ಕಟ್ಟಡದ ಮಾಲೀಕರು ತಮ್ಮ ಕಾಮಗಾರಿಯನ್ನು ನಿಲ್ಲಿಸಿಲ್ಲ. ಆ ನಂತರ, ದಿ: 04.01.2016 ರಂದು ಪ್ರಾಥಮಿಕ ನೋಟೀಸ್ ಮತ್ತು ಕಟ್ಟಡ ತೆರವುಗೊಳಿಸುವ ಬಗ್ಗೆ ಅಂತಿಮ ಆದೇಶದ ಪ್ರತಿಯನ್ನು ದಿ: 04/01/2016 ರಂದು ನೀಡಲಾಗಿದೆ. ಅಲ್ಲದೇ, ಅನಧಿಕೃತ ಕಟ್ಟಡದ ಭಾಗವನ್ನು ತೆರವುಗೊಳಿಸುವ ಬಗ್ಗೆ ಕರ್ನಾಟಕ ಮುನಿಸಿಪಾಲಿಟಿ ಕಾಯಿದೆ ಕಲಂ 462 ರಡಿ ಕ್ರಮ ಜರುಗಿಸುವ ಬಗ್ಗೆ ಅನುಮತಿ ಕೋರಿ ಕಾರ್ಯಪಾಲಕ ಅಭಿಯಂತರರಿಗೆ ಕಡತವನ್ನು ಮಂಡಿಸಲಾಗಿದೆ. ಆದರೂ ಸಹ ಸದರಿ ಶ್ರೀ ಗೋಕುಲರೆಡ್ಡಿ ರವರು ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸಿಲ್ಲವೆಂದು ಹೇಳಿದ್ದಾರೆ.

5. ಆ.ಸ.ನೌಕರರಿಂದ ಕಾರ್ಯಪಾಲಕ ಅಭಿಯಂತರರವರಿಗೆ ಕಡತವನ್ನು ಮಂಡಿಸಿರುವ ಬಗ್ಗೆ ಮುಂದುವರೆದ ವರದಿಯನ್ನು ಕೇಳಲಾಗಿ, ಆ.ಸ.ನೌಕರರು ತಮ್ಮ ವರದಿಯಲ್ಲಿ ಕೆ.ಎಂ.ಸಿ. ಕಾಯ್ದೆ ಕಲಂ 462 ರಂತೆ ಕಟ್ಟಡವನ್ನು ಕೆಡವಲು ಆದೇಶ, ಸದರಿ ಕಟ್ಟಡವನ್ನು ಕೆಡವಲು ಖರ್ಚಾಗುವ ಮೊತ್ತಕ್ಕೆ ಅಂದಾಜು ಪಟ್ಟಿ ಅನುಮೋದನೆ ಹಾಗೂ ಕಟ್ಟಡ ಕೆಡವಲು ಗುತ್ತಿಗೆದಾರರನ್ನು ನಿಗದಿಗೊಳಿಸಲು ಸಕ್ಷಮ ಪ್ರಾಧಿಕಾರದ ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಕಡತವನ್ನು ಈಗಾಗಲೇ ಸಲ್ಲಿಸಲಾಗಿದೆ. ಸದರಿ ಕಟ್ಟಡದ ಅನುಮೋದನೆಯ ನಂತರ ಕೆ.ಎಂ.ಸಿ. ಕಾಯಿದೆ, 1976 ರಂತೆ ಮುಂದುವರೆದ ಕ್ರಮಗಳನ್ನು ಕೈಗೊಳ್ಳಲಾಗುವುದಾಗಿ ಹೇಳಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ;

ಆ.ಸ.ನೌಕರರು ಅನಧಿಕೃತ ಕಟ್ಟಡದ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ದಿ: 04/01/2016 ರಂದು ತಾತ್ಕಾಲಿಕ ನೋಟಿಸ್ ನೀಡಿದ್ದು, ಅದೇ ರೀತಿ ದಿ: 14/01/2016 ರಂದು ಕೆ.ಎಂ.ಸಿ. ಕಾಯ್ದೆ ಕಲಂ 320(3) ರನ್ವಯ ಆ ಆದೇಶವನ್ನು ಸ್ಥಿರೀಕರಣ ಆದೇಶವನ್ನು ಸಹ ಕಟ್ಟಡದ ಮಾಲೀಕರಾದ ಶ್ರೀ ಗೋಕುಲರೆಡ್ಡಿ ರವರಿಗೆ ಕಳುಹಿಸಿದ್ದಾರೆ. ಆದರೂ ಸಹ ಸದರಿಯವರು ಸದರಿ ಕಟ್ಟಡದ ಅನಧಿಕೃತ ಭಾಗವನ್ನು ತೆರವುಗೊಳಿಸಲು ಯಾವುದೇ ಕ್ರಮವನ್ನು

ಕೈಗೊಂಡಿಲ್ಲ. ಸದರಿ ಕಟ್ಟಡದ ಅನಧಿಕೃತ ಭಾಗವನ್ನು ತೆರವುಗೊಳಿಸುವ ಬಗ್ಗೆ ಆ.ಸ.ನೌಕರರು ಸಕ್ಷಮ ಪ್ರಾಧಿಕಾರದಿಂದ ಈ ಬಗ್ಗೆ ಯಾವುದೇ ಅನುಮತಿ ಬಂದಿಲ್ಲ, ಅನುಮತಿ ಬಂದ ನಂತರ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಆದರೆ ಆ.ಸ.ನೌಕರರು ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ದೂರುದಾರರು ಈ ದೂರನ್ನು ದಿ: 04/01/2016 ರಂದು ಸಲ್ಲಿಸಿದ್ದು, ಆ.ಸ.ನೌಕರರು ಸದರಿ ಕಟ್ಟಡದ ಮಾಲೀಕರಿಗೆ ದಿ: 04/01/2016 ರಂದು ತಾತ್ಕಾಲಿಕ ನೋಟಿಸ್ ಹಾಗೂ ದಿ: 14/01/2016 ರಂದು ಕಟ್ಟಡ ತೆರವುಗೊಳಿಸುವ ಬಗ್ಗೆ ಅಂತಿಮ ನೋಟಿಸ್ ನೀಡಿ 10 ತಿಂಗಳು ಕಳೆದಿದ್ದರೂ, ಸದರಿ ಕಟ್ಟಡದ ಅನಧಿಕೃತ ಭಾಗವನ್ನು ತೆರವುಗೊಳಿಸುವ ಬಗ್ಗೆ ಈ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸದಿರುವ ಕಾರಣ ಆ.ಸ.ನೌಕರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಆ.ಸ.ನೌಕರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

8. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಆ.ಸ.ನೌಕರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

9. ಅದಲ್ಲದೆ ಆ.ಸ.ನೌಕರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು 10) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ ನಿಮ್ಮ ವಿರುದ್ಧ ಈ ಆಪಾದನೆ.

31/12

4. ದೂರಿನಲ್ಲಿನ ಅಂಶಗಳು ಹಾಗೂ ಸಂಬಂಧಪಟ್ಟ ಎಲ್ಲಾ ದಾಖಲಾತಿ, ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಸದರಿ ದೂರಿಗೆ ಸಂಬಂಧಿಸಿದಂತೆ ಆ.ಸ.ನೌರವರಿಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ಆ.ಸ.ನೌರವರು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ, ಆಪಾದಿತ ಸರ್ಕಾರಿ ನೌಕರರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರ ನಿಯಮ 3(1)(i) ರಿಂದ (iii) ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡು ಬಂದಿದ್ದರಿಂದ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ, ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ.

5. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ: 16/05/2017 ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

6. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

3/12

7. ಆ.ಸ.ನೌ ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ದೂರಿನಲ್ಲಿ ಆಪಾದಿಸಿರುವ ಸಂಗತಿಗಳನ್ನು ನಿರಾಕರಿಸಿರುತ್ತಾರೆ. ಅನಧೀಕೃತ ಕಟ್ಟಡವನ್ನು ತೆರವುಗೊಳಿಸಲು ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಅದನ್ನು ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್‌ರವರು ಸೆಕ್ಷನ್ 462, ಕೆ.ಎಂ.ಸಿ ಕಾಯ್ದೆಯನ್ವಯ ಮಂಜೂರು ಮಾಡಬೇಕಾಗಿರುತ್ತದೆ. ತಾವು ಎ.ಇ.ಇ. ಆಗಿ ಯಾವುದೇ ಕರ್ತವ್ಯ ಲೋಪವನ್ನು ಮಾಡದೇ, ನಿಷ್ಠೆಯಿಂದ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ, ಆದಕಾರಣ ಸದರಿ ಪ್ರಕರಣದಿಂದ ದೋಷಮುಕ್ತರನ್ನಾಗಿ ಮಾಡಲು ವಿನಂತಿಸಿಕೊಂಡಿರುತ್ತಾರೆ.

8. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀಮತಿ ವತ್ಸಲಾ ಧನಂಜಯ ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.1 ರಿಂದ 7 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ತಗೆದುಕೊಳ್ಳಲಾಗಿರುತ್ತದೆ.

9. ಆ.ಸ.ನೌ ರವರು ತಮ್ಮ ಪರವಾಗಿ ತಾವೇ ಡಿ.ಡಬ್ಲ್ಯು.–1 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ನಿ.ಡಿ.1 ರಿಂದ ನಿ.ಡಿ.9 ರವರೆಗೆ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.

10. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

11. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಎಲ್ಲಾ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

31/12

12. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ನಕಾರಾತ್ಮಕವಾಗಿದೆ.**

**ಅಂಶ 2: ಅಂತಿಮ ಆದೇಶದಂತೆ**

**<u>ಕಾರಣಗಳು:</u>**

14. ಈ ಪ್ರಕರಣದಲ್ಲಿ ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಶ್ರೀಮತಿ ವತ್ಸಲಾ ಧನಂಜಯ ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ.1 ರಿಂದ ನಿ.ಪಿ.7ರ ವರೆಗಿನ ದಾಖಲೆಗಳನ್ನು ಕ್ರಮವಾಗಿ ಗುರುತಿಸಿಕೊಂಡಿರುತ್ತಾರೆ ಅಂದರೆ ದೂರುದಾರರ ದೂರನ್ನು ನಿ.ಪಿ.1, ನಮೂನೆ–1 ಅನ್ನು ನಿ.ಪಿ.2, ನಮೂನೆ–2 ಅನ್ನು ನಿ.ಪಿ.3, ದಿನಾಂಕ: 22/12/2015ರ ದೂರನ್ನು ನಿ.ಪಿ.4 ಎಂದು, ದಿನಾಂಕ: 02/01/2016ರ ದೂರನ್ನು ನಿ.ಪಿ.5 ಎಂದು, ದಿನಾಂಕ: 18/2/2016ರ ದೂರುದಾರರ ಪ್ರತ್ಯುತ್ತರವನ್ನು ನಿ.ಪಿ.6 ಎಂದು, ಕಲರ್ ಜೆರಾಕ್ಸ್ ಫೋಟೋವನ್ನು ನಿ.ಪಿ.7 ಎಂದು ಗುರುತಿಸಿರುತ್ತಾರೆ.

15. ಆ.ಸ.ನೌ ರವರಾದ ಶ್ರೀ ಕೋದಂಡರೆಡ್ಡಿ ಇವರನ್ನು ಡಿ.ಬ್ಲ್ಯೂ–1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಡಿ.1 ರಿಂದ ನಿ.ಡಿ. 9 ರವರೆಗೆ ಅಂದರೆ ಡಿ.ಜಿ.ಓ. ರವರ ಲಿಖಿತ ಹೇಳಿಕೆಯನ್ನು ನಿ.ಡಿ.1, ಡಿ.ಜಿ.ಓ ರವರ ಆಕ್ಷೇಪಣೆ ದಿನಾಂಕ: 25/1/2016 ನಿ.ಡಿ.2, ಹಿಂಬರಹ

ಟಿ 3/12

ದಿನಾಂಕ: 30/11/2015ನ್ನು ನಿ.ಡಿ.3, ತಿಳುವಳಿಕೆ ಪತ್ರ ದಿನಾಂಕ: 29/12/2015ನ್ನು ನಿ.ಡಿ. 4, ತಾತ್ಕಾಲಿಕ ಆದೇಶ ದಿನಾಂಕ: 04/01/2016ನ್ನು ನಿ.ಡಿ.6, ತಾತ್ಕಾಲಿಕ ಆದೇಶ ದಿ: 4/1/2016ನ್ನು ನಿ.ಡಿ.7, ಸ್ಥಿರೀಕರಣ ಆದೇಶ ದಿನಾಂಕ: 14/1/2016 ನಿ.ಡಿ.8, ಟಿಪ್ಪಣಿಗಳು ಮತ್ತು ಆಜ್ಞೆಗಳು ದಿನಾಂಕ: 2/1/2016 ಹಾಗೂ ಕಟ್ಟಡ ತೆರವುಗೊಳಿಸಲು ಅಂದಾಜು ಪಟ್ಟಿಯನ್ನು ನಿ.ಡಿ. 9 ಎಂದು ಗುರುತಿಸಿರುತ್ತಾರೆ.

16. ದೂರುದಾರರ ಆಪಾದನೆ ಮತ್ತು ಆ.ಸ.ನೌ ರವರ ವಿರುದ್ಧ ರಚಿಸಲಾದ ದೋಷಾರೋಪಣೆ ಏನೆಂದರೆ, ಆ.ಸ.ನೌಕರರಾದ ನೀವು ಅನಧೀಕೃತ ಕಟ್ಟಡದ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ದಿನಾಂಕ: 04/01/2016 ರಂದು ತಾತ್ಕಲಿಕ ನೋಟೀಸ್ ನೀಡಿದ್ದು, ಅದೇ ರೀತಿ ದಿನಾಂಕ: 14/01/2016 ರಂದು ಕೆ.ಎಂ.ಸಿ. ಕಾಯ್ದೆ ಕಲಂ 321(3)ರನ್ವಯ ಆದೇಶವನ್ನು ಸ್ಥಿರೀಕರಣಗೊಳಿಸಿ, ಸ್ಥಿರೀಕರಣ ಆದೇಶವನ್ನು, ಬೆಂಗಳೂರು ನಗರ ಅರಳೂರು ರಸ್ತೆಯ ನಿವೇಶನ ಸಂಖ್ಯೆ.33ರ ಕಟ್ಟಡದ ಅನಧೀಕೃತ ಭಾಗವನ್ನು ತೆರವುಗೊಳಿಸಲು ಯಾವುದೇ ಕ್ರಮವನ್ನು ಕೈಗೊಂಡಿಲ್ಲ; ಸದರಿ ಕಟ್ಟಡದ ಭಾಗವನ್ನು ತೆರವುಗೊಳಿಸುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಅನುಮತಿ ಬಂದಿಲ್ಲ, ಅನುಮತಿ ಬಂದ ನಂತರ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದರು, ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ; ದೂರುದಾರರು ದೂರನ್ನು ದಿ: 4/1/2016ರಂದು ತಾತ್ಕಾಲಿಕ ನೋಟೀಸ್ ಹಾಗೂ ದಿ: 14/01/2016 ರಂದು ಕಟ್ಟಡ ತೆರವುಗೊಳಿಸುವ ಬಗ್ಗೆ ಅಂತಿಮ ನೋಟಿಸ್ ನೀಡಿ 10 ತಿಂಗಳು ಕಳೆದಿದ್ದರೂ, ಸದರಿ ಕಟ್ಟಡದ ಅನಧಿಕೃತ ಭಾಗವನ್ನು ತೆರವುಗೊಳಿಸುವ ಬಗ್ಗೆ ಈ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸದೇ ಕರ್ತವ್ಯಲೋಪ ಎಸಗಿರುತ್ತಾರೆ. ಆದಕಾರಣ ಆ.ಸ.ನೌರರು ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುತ್ತಾರೆ ಎನ್ನುವುದನ್ನು ರುಜುವಾತು ಪಡಿಸಬೇಕಾಗಿರುತ್ತದೆ.

31/12

17. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆ.ಸ.ನೌ ರವರು ಎ.ಇ.ಇ., ವಾರ್ಡ್ ನಂ. 150 ರಲ್ಲಿ 2016ರಲ್ಲಿ ಕರ್ತವ್ಯ ನಿರ್ವಹಿಸಿದ್ದು, ಬೆಂಗಳೂರು ನಗರ ಅರಳೂರು ರಸ್ತೆಯ ನಿವೇಶನ ಸಂಖ್ಯೆ.33ರ ಮಾಲೀಕರಾದ ಶ್ರೀ ಗೋಕುಲರೆಡ್ಡಿ ಇವರು ಕಾನೂನುಬಾಹಿರವಾಗಿ ಬಿ.ಬಿ.ಎಂ.ಪಿಯ ಅನುಮೋದಿತ ನಕ್ಷೆ ಇಲ್ಲದೇ ಕಟ್ಟಡ ನಿರ್ಮಿಸಿದ್ದು, ಈ ಬಗ್ಗೆ ಆ.ಸ.ನೌರವರಿಗೆ ದೂರು ನೀಡಿದರೂ ಸಹ, ಯಾವುದೇ ಕ್ರಮ ಕೈಗೊಂಡಿಲ್ಲದಿರುವುದಿಲ್ಲ ಮತ್ತು ಅನಧೀಕೃತ ಕಟ್ಟಡವನ್ನು ತೆರವುಗೊಳಿಸಿರುವುದಿಲ್ಲ. ಆಕಾರಣ ಈ ಸಂಸ್ಥೆಯಲ್ಲಿ ದೂರನ್ನು ನಿ.ಪಿ.1 ರಿಂದ 3 ರಂತೆ ದಾಖಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

18. ಆ.ಸ.ನೌರವರು ಈ ಪ್ರಾಧಿಕಾರದ ಮುಂದೆ ಸಾಕ್ಷ್ಯ ನುಡಿದಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ, ವಾರ್ಡ್ ನಂ. 150, ಸೈಟ್ ನಂ. 33, ಸರ್ವೆ ನಂ.21 & 22, 1ನೇ ಮುಖ್ಯ ರಸ್ತೆ, ಶುಭ್ ಎನ್‌ಕ್ಲೇವ್ ಬಡಾವಣೆ, ಅಂಬಲೀಪುರ ಗ್ರಾಮ ಬೆಂಗಳುರು ಇಲ್ಲೆ ಕೆ.ಎಂ.ಸಿ. ಕಾಯ್ದೆ ಉಲ್ಲಂಘಿಸಿ ಅನಧೀಕೃತವಾಗಿ ಕಟ್ಟಡವನ್ನು ನಿರ್ಮಾಣ ಮಾಡುತ್ತಿದ್ದಾರೆಂದು ಆರೋಪಿಸಿರುವ ದೂರಿಗೆ, ನಿ.ಡಿ.4 ರಂತೆ ಕಟ್ಟಡದ ಮಾಲೀಕರಿಗೆ ತಿಳುವಳಿಗೆ ಪತ್ರವನ್ನು ನೀಡಿ ಕಟ್ಟಡದಕ್ಕೆ ಸಮಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಮುಂದುವರೆದು, ಕಟ್ಟಡದ ಮಾಲೀಕರು ಯಾವುದೇ ರೀತಿಯ ಉತ್ತರ ನೀಡದ ಹಿನ್ನೆಲೆಯಲ್ಲಿ, ಕಟ್ಟಡವು ಅನಧೀಕೃತ ಕಟ್ಟಡವೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು, ಕಟ್ಟಡದ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ನೋಟಿಸ್‌ನ್ನು ದಿನಾಂಕ: 02/01/2016ರಂದು ನೀಡಿರುತ್ತದೆ. ಆನಂತರ ಕಟ್ಟಡದ ಮಾಲೀಕರು ಕಟ್ಟಡದ ಕಾಮಗಾರಿಯನ್ನು ಮುಂದುವರೆಸುತ್ತಿದ್ದರಿಂದ ಕಟ್ಟಡದ ಮಾಲೀಕರಿಗೆ ನಿ.ಡಿ.6 & 7 ರಂತೆ ಕೆ.ಎಂ.ಸಿ. ಕಾಯ್ದೆ 1976ರ ಪ್ರಕಾರ 321(1) ಮತ್ತು (2)ರ ತಾತ್ಕಾಲಿಕ ಆದೇಶವನ್ನು ಜಾರಿ ಮಾಡಲಾಗಿರುತ್ತದೆ; ಕಟ್ಟಡದ ಮಾಲೀಕರು ನಿ.ಡಿ.6 & 7 ಕ್ಕೆ ಯಾವುದೇ ರೀತಿ ಪ್ರತಿಕ್ರಿಯೆ ನೀಡದೇ ಇದ್ದರಿಂದ ನಿ.ಡಿ.8 ರಂತೆ ದಿನಾಂಕ: 14/1/2016ರಂದು ಕೆ.ಎಂ.ಸಿ. ಕಾಯ್ದೆ 1976ರ ಪ್ರಕಾರ 321(3)ರ ಸ್ಥಿರೀಕರಣ ಆದೇಶದ ನೋಟೀಸ್‌ನ್ನು ಕಟ್ಟಡದ ಮಾಲೀಕದಾರರಿಗೆ ಜಾರಿ ಮಾಡಲಾಗಿರುತ್ತದೆ. ಮುಂದುವರೆದು, ಅನಧೀಕೃತ ಕಟ್ಟಡವನ್ನು ತೆರವುಗೊಳಿಸಲು ಅಂದಾಜು ಪಟ್ಟಿಯನ್ನು

31/12

ತಯಾರಿಸಿ ಕಡತವನ್ನು ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗರವರಿಗೆ ನಿ.ಡಿ. 9ರಂತೆ ಸಲ್ಲಿಸಲಾಗಿರುತ್ತದೆ; ತದನಂತರ ಸದರಿ ಕಾರ್ಯಪಾಲಕ ಅಭಿಯಂತರರವರಿಂದ ಯಾವುದೇ ಆದೇಶವು ಬಂದಿರುವುದಿಲ್ಲ ಮತ್ತು ಅನಧೀಕೃತ ಕಟ್ಟಡವನ್ನು ತೆರವುಗೊಳಿಸಲು ಆದೇಶಿಸಲು ಕಾರ್ಯಪಾಲಕ ಅಭಿಯಂತರರವರಿಗೆ ಅಧಿಕಾರ ಇರುತ್ತದೆ ಹಾಗೂ ತಾನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ತಮ್ಮ ವ್ಯಾಪ್ತಿಗೆ ಬರುವಂತಹ ಕೆಲಸವನ್ನು ನಿರ್ವಹಿಸಲಾಗಿರುತ್ತದೆ, ಆದಕಾರಣ ತಾವು ಯಾವುದೇ ಕರ್ತವ್ಯ ಲೋಪವನ್ನು ಮಾಡಿರುವುದಿಲ್ಲವಾಗಿ ಸಾಕ್ಷ್ಯ ನುಡಿದಿರುತ್ತಾರೆ.

19. ಸಾಕ್ಷಿದಾರರ ಸಾಕ್ಷಿ, ಗುರುತಿಸಿರುವ ದಾಖಲೆಗಳನ್ನು ಹಾಗೂ ಕಡತದಲ್ಲಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ವಾರ್ಡ್ ನಂ. 150ರ ವ್ಯಾಪ್ತಿಯ ಸೈಟ್ ನಂ. 33, ಬಾ–92, ಸರ್ವೆ ನಂ. 21 & 22, 1ನೇ ಮುಖ್ಯ ರಸ್ತೆ, ಶುಭ ಎನ್‌ಕ್ಲೇವ್ ಬಡಾವಣೆ, ಅಂಬಲೀಪುರ ಗ್ರಾಮ, ಶ್ರೀ ಗೋಕುಲ್ ರೆಡ್ಡಿಯವರಿಗೆ ಸೇರಿರುತ್ತದೆ. ನಿ.ಡಿ.3 ಹಿಂಬರಹ ದಿನಾಂಕ: 30/11/2015ರನ್ನು ನೋಡಿದಾಗ, ಸದರಿ ಗೋಕುಲರೆಡ್ಡಿಯವರು ಖಾತೆ ಸಂಖ್ಯೆ. 92/99/110/21, 22/33ರಲ್ಲಿ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿ ಕೋರಿ ದಿನಾಂಕ: 26/11/2015 ರಂದು ಸಲ್ಲಿಸಿದ ಮೇರೆಗೆ, ಸಹಾಯಕ ಅಭಿಯಂತರವರ ವರದಿಯ ಪ್ರಕಾರ ಹಾಗೂ ದಾಖಲೆಗಳ ಪ್ರಕಾರ ಸ್ವತ್ತಿನ ವಿಸ್ತೀರ್ಣವು 25 * 20 ಇದ್ದು, ಒಟ್ಟು ವಿಸ್ತೀರ್ಣವು 500 ಚ.ಅ. ಅಂದರೆ 46.40 ಚ.ಮೀ. ಇದ್ದು, Bangalore Mahanagar Palike, Building Bye-Laws-2003, Part-III, General Building Requirements 7.2 ರ ಪ್ರಕಾರ ಕಟ್ಟಡ ನಿರ್ಮಿಸಲು ಸ್ವತ್ತಿನ ವಿಸ್ತೀರ್ಣವು ಕನಿಷ್ಟ 50.00 ಚ.ಮಿ. ಇರಬೇಕಿದ್ದು, ನಕ್ಷೆ ಮಂಜೂರಾತಿ ಕೋರಿರುವ ಸ್ವತ್ತಿನ ವಿಸ್ತೀರ್ಣವು ಕಡಿಮೆ ಇರುವುದರಿಂದ ಸದರಿ ಸ್ವತ್ತಿಗೆ ನಕ್ಷೆ ಮಂಜೂರಾತಿ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿ, ಹಿಂಬರಹವನ್ನು ನೀಡಿರುತ್ತದೆ. ಸದರಿ Bangalore Mahanagar Palike, Building Bye-Laws-2003, Part-III, General Building Requirements Rule 7.2, ಈ ಕೆಳಕಂಡಂತೆ ಇರುತ್ತದೆ.

3/1/12

**Rule 7.2** No Plan shall be sanctioned for a residential detached building on a plot measuring less than 50 sqm. or having width less than 6 metres. In specific cases of sites for housing schemes for EWS, LIG, Slum Clearance and Improvement Schemes as well as reconstruction in case of densly populated areas, and plot sub-divided due to family partitions, the Authority may relax the above conditions.

20. ಸದರಿ ಖಾತೆ ಸಂಖ್ಯೆ. 92 ರಲ್ಲಿ ಕಟ್ಟಡ ಕಟ್ಟುತ್ತಿರುವ ಬಗ್ಗೆ ದೂರುದಾರರು ದಿನಾಂಕ: 22/12/2015 ರಂದು ದೂರನ್ನು ನಿ.ಪಿ.1 ರ ಪ್ರಕಾರ ಬಿ.ಬಿ.ಎಂ.ಪಿ.ರವರಿಗೆ ಮತ್ತು ಮೇಯರ್ ರವರಿಗೆ ದಿನಾಂಕ: 02/01/2016ರಂದು ಸಲ್ಲಿಸಿರುತ್ತಾರೆ. ತದನಂತರ ಅಂದರೆ ಆ.ಸ.ನೌ ರವರು ಸದರಿ ದೂರಿನನ್ವಯ ದಿನಾಂಕ: 02/01/2016ರಂದು ಕಟ್ಟಡಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನೀಡುವಂತೆ ನೋಟೀಸ್ ನೀಡಿದ್ದು, ತದನಂತರ ದಿನಾಂಕ: 04/01/2016ರಂದು ತಾತ್ಕಾಲಿಕ ಆದೇಶವನ್ನು ಕೆ.ಎಂ.ಸಿ. ಕಾಯ್ದೆ ರಂತೆ 321(1)ರ ಪ್ರಕಾರ ಮತ್ತು ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ದಿನಾಂಕ: 14/01/2016 ರಂದು ಸ್ಥಿರೀಕರಣ ಆದೇಶವನ್ನು ಕಟ್ಟಡದ ಮಾಲೀಕರಾದ ಗೋಕುಲರೆಡ್ಡಿರವರಿಗೆ ನಿ.ಡಿ.6 ಮತ್ತು ನಿ.ಡಿ.7 ರಂತೆ ನೀಡಿರುವುದು ಕಂಡುಬರುತ್ತದೆ.

21. ಶಿಸ್ತುಪ್ರಾಧಿಕಾರದ ಪ್ರಕಾರ ಕಟ್ಟಡದ ಅನಧಿಕೃತ ಭಾಗವನ್ನು ತೆರವುಗೊಳಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಬಂದಿಲ್ಲ, ಅನುಮತಿ ಬಂದ ನಂತರ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದರೂ, ಆ ಬಗ್ಗೆ ಅಂದರೆ ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದು ಆರೋಪವಿರುತ್ತದೆ. ಈ ಸಂಬಂಧ ಆ.ಸ.ನೌ ರವರು ಟಿಪ್ಪಣಿ ಹಾಳೆಯ ಜೆರಾಕ್ಸ್ ಪ್ರತಿಯನ್ನು ನಿ.ಡಿ.9 ರಂತೆ ಹಾಜರುಪಡಿಸಿರುತ್ತಾರೆ. ನಿ.ಡಿ.9ರ ದಾಖಲೆಯನ್ನು ಪರಿಶೀಲಿಸಿದಾಗ, ತಾತ್ಕಾಲಿಕ ಆದೇಶ ಮತ್ತು

3\1\12

ಸ್ಥಿರೀಕರಣ ಆದೇಶ ಜಾರಿಯಾದ ನಂತರ, ಕಟ್ಟಡ ಮಾಲೀಕರು ಯಾವುದೇ ಉತ್ತರ ನೀಡದಿದ್ದರಿಂದ, ಕಟ್ಟಡವನ್ನು ತೆರವುಗೊಳಿಸಲು ಸುಮಾರು ರೂ. 1.20 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ನಿ.ಡಿ. 9 ರಂತೆ ತಯಾರಿಸಿ, ಸದರಿ ಟಿಪ್ಪಣಿಯೊಂದಿಗೆ ಕಡತವನ್ನು ಕಾರ್ಯಪಾಲಕ ಅಭಿಯಂತರರು, ಮಹಾದೇವಪುರ ವಿಭಾಗದವರಿಗೆ, ನಿ.ಡಿ.9 ರಂತೆ ದಿನಾಂಕ: 27/01/2016ರಂದು ಮಂಡಿಸಿರುವುದು ಕಂಡುಬರುತ್ತದೆ. ನಿ.ಡಿ.9 ಅಂದಾಜು ಪಟ್ಟಿ ಮತ್ತು ನಿ.ಡಿ.9 ಟಿಪ್ಪಣಿ ಪ್ರಕಾರ, ಅನಧಿಕೃತ ಭಾಗವನ್ನು ತೆರವುಗೊಳಿಸುವ ಬಗ್ಗೆ ತಾತ್ಕಾಲಿಕ ಮತ್ತು ಸ್ಥಿರೀಕರಣ ಆದೇಶದ ನಂತರ ಸಕ್ಷಮ ಪ್ರಾಧಿಕಾರಕ್ಕೆ ಅಂದಾಜುಪಟ್ಟಿ ಮತ್ತು ಟಿಪ್ಪಣಿಯನ್ನು ಅನುಮೋದನೆಗಾಗಿ ಮನವಿಯನ್ನು ದಿನಾಂಕ: 27/01/2016ರಂದು ಸಲ್ಲಿಸಿರುತ್ತಾರೆ. ಈ ಎರಡೂ ದಾಖಲೆಗಳನ್ನು ತಿರಸ್ಕರಿಸಲು ಅಥವಾ ಸಂಶಯ ಪಡಲು ಶಿಸ್ತು ಪ್ರಾಧಿಕಾರದವರು ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಆ.ಸ.ನೌ ರವರು ಅನಧೀಕೃತ ಭಾಗವನ್ನು ತೆರವುಗೊಳಿಸಲು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮತ್ತು ಮನವಿ ಸಲ್ಲಿಸಿಲ್ಲ ಎನ್ನುವ ಆರೋಪದಲ್ಲಿ ಯಾವುದೇ ಹುರುಳಿರುವುದಿಲ್ಲ. ಮೇಲೆ ಚರ್ಚಿಸಿದಂತೆ, ಕಟ್ಟಡದ ಅನಧೀಕೃತ ಭಾಗವನ್ನು ತೆರವುಗೊಳಿಸುವ ಬಗ್ಗೆ, ತಾತ್ಕಾಲಿಕ ಮತ್ತು ಸ್ಥಿರೀಕರಣ ಆದೇಶದ ನಂತರ, ಸಕ್ಷಮ ಪ್ರಾಧಿಕಾರಕ್ಕೆ ಮನವಿ ಮತ್ತು ವರದಿಯನ್ನು ಸಲ್ಲಿಸದೇ ಆ.ಸ.ನೌ ರವರು ಕರ್ತವ್ಯಲೋಪ ಎಸಗಿರುತ್ತಾರೆ ಅಂತ ರುಜುವಾತು ಪಡಿಸಲು ಶಿಸ್ತು ಪ್ರಾಧಿಕಾರವು ವಿಫಲರಾಗಿರುತ್ತದೆ ಎಂದು ಅಭಿಪ್ರಾಯಿಸಿ, ಅಂಶ–1 ಕ್ಕೆ **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರ–ಶ್ರೀ ಕೋದಂಡರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಳ್ಳಂದೂರು ವಾರ್ಡ್ ನಂ. 150, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರ ವಿರುದ್ಧ ಮಾಡಲಾದ ಆರೋಪಗಳನ್ನು ಶಿಸ್ತು ಪ್ರಾಧಿಕಾರವು **ರುಜುವಾತುಪಡಿಸಲು ವಿಫಲವಾಗಿರುತ್ತದೆ.**

3/1/12

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

31ನೇ ಡಿಸೆಂಬರ್ 2020

(ಪುಷ್ಪಾಂಜಲಿ. ಬಿ)
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಆ.ಸ.ನೌ ರವರ ನಿವೃತ್ತಿ ದಿ: 31/07/2028

## ಅನುಬಂಧಗಳು

I. **ಶಿಸ್ತು ಪ್ರಾಧಿಕಾರದ ಪರವಾಗಿ ನುಡಿದ ಸಾಕ್ಷ್ಯಗಳ ವಿವರ :**

ಪಿ.ಡಬ್ಲ್ಯೂ–1 : ಶ್ರೀಮತಿ ವತ್ಸಲಾ ಧನಂಜಯ (ದೂರುದಾರರು)

II. **ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿರುವ ದಾಖಲೆಗಳ ವಿವರ :**

| | |
|---|---|
| ನಿ.ಪಿ. 1 : | ದೂರುದಾರರ ದೂರು ದಿ: 4/1/2016 |
| ನಿ.ಪಿ. 2 : | ನಮೂನೆ–1 |
| ನಿ.ಪಿ. 3 : | ನಮೂನೆ–2 |
| ನಿ.ಪಿ. 4 : | ದಿನಾಂಕ: 22/12/2015ರ ದೂರು |
| ನಿ.ಪಿ. 5 : | ದಿನಾಂಕ: 02/01/2016ರ ದೂರು |
| ನಿ.ಪಿ. 6 : | ದಿನಾಂಕ: 18/2/2016ರ ದೂರುದಾರರ ಪ್ರತ್ಯುತ್ತರ |
| ನಿ.ಪಿ. 7 : | ಕಲರ್ ಜೆರಾಕ್ಸ್ ಫೋಟೊ |

III. **ಆ.ಸ.ನೌರವರ ಪರವಾಗಿ ನುಡಿದ ಸಾಕ್ಷ್ಯಗಳ ವಿವರ :**

ಡಿ.ಡಬ್ಲ್ಯೂ–1 : ಶ್ರೀ ಕೋದಂಡರೆಡ್ಡಿ (ಡಿ.ಜಿ.ಓ)

IV. **ಆ.ಸ.ನೌ ರವರ ಪರವಾಗಿ ಗುರುತಿಸಿರುವ ದಾಖಲೆಗಳ ವಿವರ :**

| | |
|---|---|
| ನಿ.ಡಿ. 1 : | ಡಿ.ಜಿ.ಓ. ರವರ ಲಿಖಿತ ಹೇಳಿಕೆ ದಿ: 26/9/2017 |

31/12

| | |
|---|---|
| ನಿ.ಡಿ. 2 : | ಡಿ.ಜಿ.ಓ ರವರ ಆಕ್ಷೇಪಣೆ ದಿನಾಂಕ: 25/1/2016 |
| ನಿ.ಡಿ. 3 : | ಹಿಂಬರಹ ದಿನಾಂಕ: 30/11/2015 |
| ನಿ.ಡಿ. 4 : | ತಿಳುವಳಿಕೆ ಪತ್ರ ದಿನಾಂಕ: 29/12/2015 |
| ನಿ.ಡಿ. 5 : | ತಾತ್ಕಾಲಿಕ ಆದೇಶ ದಿನಾಂಕ: 02/01/2016 |
| ನಿ.ಡಿ. 6 : | ತಾತ್ಕಾಲಿಕ ಆದೇಶ ದಿ: 4/1/2016 |
| ನಿ.ಡಿ. 7 : | ತಾತ್ಕಾಲಿಕ ಆದೇಶ ದಿ: 4/1/2016 |
| ನಿ.ಡಿ. 8 : | ಸ್ಥಿರೀಕರಣ ಆದೇಶ ದಿನಾಂಕ: 14/01/2016 |
| ನಿ.ಡಿ. 9 : | ಟಿಪ್ಪಣಿಗಳು ಮತ್ತು ಆಜ್ಞೆಗಳು ದಿನಾಂಕ: 2/1/2016 ಹಾಗೂ ಕಟ್ಟಡ ತೆರವುಗೊಳಿಸಲು ಅಂದಾಜು ಪಟ್ಟಿಯನ್ನು |

31ನೇ ಡಿಸೆಂಬರ್ 2020

31/12/2020

(ಪುಷ್ಪಾಂಜಲಿ. ಜಿ)
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# GOVERNMENT OF KARNATAKA

# KARNATAKA LOKAYUKTA

No.UPLOK-1/DE/175/2017/ARE-10

Multi Storied Buildings,
Dr.B.R.Ambedkar Veedhi,
Bengaluru-560 001,
Date **01/01/2021**

## RECOMMENDATION

Sub:- Departmental inquiry against;
Sri Kodandareddy, Assistant Executive Engineer, Bellandur Ward No.150, Bruhat Bengaluru Mahanagara Palike, Bengaluru – Reg.

Ref:-1) Government Order No. ನಅಇ 701 ಎಂಎನ್‌ಯು 2016 Bengaluru dated 22/12/2016.

2) Nomination order No.UPLOK-1/DE/175/2017 Bengaluru dated 04/02/2017 of Upalokayukta-1, State of Karnataka, Bengaluru.

3) Inquiry Report dated 31/12/2020 of Additional Registrar of Enquiries-10, Karnataka Lokayukta, Bengaluru

----

The Government by its Order dated 22/12/2016 initiated the disciplinary proceedings against Sri Kodandareddy, Assistant Executive Engineer, Bellandur Ward No.150, Bruhat Bengaluru Mahanagara Palike, Bengaluru (hereinafter referred to as Delinquent Government Official for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/175/2017 dated 04/02/2017 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO Sri Kodandareddy, Assistant Executive Engineer, Bellandur Ward No.150, Bruhat Bengaluru Mahanagara Palike, Bengaluru was tried for the following charge:-

"ಆಪಾದಿತ ಸರ್ಕಾರಿ ನೌಕರರಾದ ಶ್ರೀ ಕೋದಂಡರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ. ಬೆಳ್ಳಂದೂರು ವಾರ್ಡ್ ನಂ.150 ಆದ ನೀವು ಈ ಕೆಳಕಂಡ ಕರ್ತವ್ಯಲೋಪವನ್ನು ಎಸಗಿರುತ್ತೀರಿ.

ಆ.ಸ.ನೌಕರರಾದ ನೀವು ಅನಧಿಕೃತ ಕಟ್ಟಡದ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ದಿ:04/01/2016 ರಂದು ತಾತ್ಕಾಲಿಕ ನೋಟಿಸ್ ನೀಡಿದ್ದು, ಅದೇ ರೀತಿ ದಿ: 14/01/2016 ರಂದು ಕೆ.ಎಂ.ಸಿ. ಕಾಯ್ದೆ ಕಲಂ 320(3) ರನ್ವಯ ಆ ಆದೇಶವನ್ನು ಸ್ಥಿರೀಕರಣಗೊಳಿಸಿ, ಸ್ಥಿರೀಕರಣ ಆದೇಶವನ್ನು ಸಹ ಬೆಂಗಳೂರು ನಗರ ಅರಳೂರು ರಸ್ತೆಯ ನಿವೇಶನ ಸಂಖ್ಯೆ.33ರ ಕಟ್ಟಡದ ಮಾಲೀಕರಾದ ಶ್ರೀ ಗೋಕುಲರೆಡ್ಡಿ ರವರಿಗೆ ಕಳುಹಿಸಿರುತ್ತೀರಿ. ಆದರೂ ಸಹ ಸದರಿ ಕಟ್ಟಡದ ಅನಧಿಕೃತ ಭಾಗವನ್ನು ತೆರವುಗೊಳಿಸಲು ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಸದರಿ ಕಟ್ಟಡದ ಭಾಗವನ್ನು ತೆರವುಗೊಳಿಸುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಅನುಮತಿ ಬಂದಿಲ್ಲ. ಅನುಮತಿ ಬಂದ ನಂತರ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದೀರಿ. ಆದರೆ, ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ದೂರುದಾರರು ಈ ದೂರನ್ನು ದಿ: 04/01/2016 ರಂದು ತಾತ್ಕಾಲಿಕ ನೋಟಿಸ್ ಹಾಗೂ ದಿ: 14/01/16 ರಂದು ಕಟ್ಟಡ ತೆರವುಗೊಳಿಸುವ ಬಗ್ಗೆ ಅಂತಿಮ ನೋಟಿಸ್ ನೀಡಿ 10 ತಿಂಗಳು ಕಳೆದಿದ್ದರೂ, ಸದರಿ ಕಟ್ಟಡದ ಅನಧಿಕೃತ ಭಾಗವನ್ನು ತೆರವುಗೊಳಿಸಿರುವ ಬಗ್ಗೆ ಈ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸದೆ ಕರ್ತವ್ಯಲೋಪ ಎಸಗಿರುತ್ತೀರಿ.

ಆದಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ."

4. The Inquiry Officer (Additional Registrar of Enquiries-10) on proper appreciation of oral and documentary evidence has held that the Disciplinary Authority has failed to prove the above charge against DGO Sri Kodandareddy, Assistant Executive Engineer, Bellandur Ward No.150, Bruhat Bengaluru Mahanagara Palike, Bengaluru.

5. On re-consideration of inquiry report and considering the totality of circumstances, I do not find any reason to interfere with the findings recorded by the Inquiry Officer.

6. It is hereby recommended to the Government to accept the report of Inquiry Officer and to exonerate the DGO Sri Kodandareddy, Assistant Executive Engineer, Bellandur Ward No.150, Bruhat Bengaluru Mahanagara Palike, Bengaluru of the aforesaid charge.

7. Action taken in the matter shall be intimated to this Authority.

Connected records are enclosed herewith.

1-1-21

**(JUSTICE B.S. PATIL)**
Upalokayukta,
State of Karnataka,
Bengaluru